# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 644 (687) |
| ಮಾನ್ಯ ಸದಸ್ಯರ ಹೆಸರು | ಶ್ರೀ ಪ್ರತಾಪ್ ಸಿಂಹ ನಾಯಕ್ ಕೆ<br>(ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | 12 /12/2025 |
| ಉತ್ತರಿಸುವವರು | ಮಾನ್ಯ ಕಾರ್ಮಿಕ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಕಾರ್ಮಿಕರ ಮಕ್ಕಳ ವಿದ್ಯಾರ್ಥಿ ವೇತನ ಪರಿಶೀಲನೆಯ ಸಂದರ್ಭದಲ್ಲಿ, ನೈಜ ಕಟ್ಟಡ ಕಾರ್ಮಿಕರಾಗಿದ್ದರೂ ಸಹ ಮಂಡಳಿ ಪರಿಶೀಲಿಸುವ ತಂತ್ರಾಂಶಗಳಿಂದ ಬೇರೆ ವೃತ್ತಿ ಕಂಡು ಬರುವ ಕಾರ್ಮಿಕರ ಮಕ್ಕಳ ಅರ್ಜಿಗಳನ್ನು ಅತಾರ್ತಿಕವಾಗಿ ತಿರಸ್ಕೃತಗೊಳಿಸುವುತ್ತಿರುವುದರಿಂದ ಹಲವಾರು ನೈಜ ಕಟ್ಟಡ ಕಾರ್ಮಿಕರ ಮಕ್ಕಳು ಸರಿ ಸೌಲಭ್ಯ ಪಡೆಯುವುದರಿಂದ ವಂಚಿತರಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಮಂಡಳಿಯಲ್ಲಿ ನೋಂದಾಯಿತ ಕಟ್ಟಡ ಕಾರ್ಮಿಕರು ವಿದ್ಯಾರ್ಥಿ ವೇತನಕ್ಕಾಗಿ ಅರ್ಜಿ ಸಲ್ಲಿಸಿದ ನಂತರ, ಸದರಿಯವರ ವೃತ್ತಿಯನ್ನು ಕುಟುಂಬ ತಂತ್ರಾಂಶದ ಮೂಲಕ ಪರಿಶೀಲಿಸಿದಾಗ, ಅದರಲ್ಲಿ ಕಟ್ಟಡ ಕಾರ್ಮಿಕ ಎಂದು ವೃತ್ತಿ ಎಂದು ಖಚಿತವಾಗಿ ಕಂಡು ಬಂದಾಗ ಅವರಿಗೆ ನೇರವಾಗಿ ಡಿಬಿಟಿ ಮುಖಾಂತರ ಮಂಡಳಿ ವತಿಯಿಂದ ಶೈಕ್ಷಣಿಕ ಧನಸಹಾಯ ಪಾವತಿಸಲಾಗುತ್ತದೆ. ಹಾಗೂ ಇನ್ನುಳಿದ ವೃತ್ತಿಯೆಂದು ಕುಟುಂಬ ತಂತ್ರಾಂಶದಲ್ಲಿ ತೋರ್ಪಟ್ಟಲ್ಲಿ ಅಂತಹ ಅರ್ಜಿಗಳನ್ನು ಸಂಬಂಧಪಟ್ಟ ಹಿರಿಯ ಕಾರ್ಮಿಕ ನಿರೀಕ್ಷಕರು/ ಕಾರ್ಮಿಕ ನಿರೀಕ್ಷಕರ ಕಛೇರಿಗೆ ಪರಿಶೀಲನೆಗೆ ಕಳುಹಿಸಿ ಅವರ ವೃತ್ತಿ ಕಟ್ಟಡ ಕಾರ್ಮಿಕರೆಂದು ಕಂಡು ಬಂದಲ್ಲಿ ಅಂತಹ ಅರ್ಜಿಗಳನ್ನು ಪರಿಗಣಿಸಿ ಡಿಬಿಟಿ ಮೂಖಾಂತರ ಶೈಕ್ಷಣಿಕ ಸಹಾಯಧನವನ್ನು ಪಾವತಿಸಲು ಕ್ರಮ ವಹಿಸಲಾಗುತ್ತಿದೆ. ಇನ್ನು ಉಳಿದ ಅರ್ಜಿಗಳು ಪರಿಶೀಲನೆಯ ಸಮಯದಲ್ಲಿ ಕಟ್ಟಡ ಕಾರ್ಮಿಕರಲ್ಲವೆಂದು ತಿಳಿದು ಬಂದಲ್ಲಿ ಅಂತಹ ಅರ್ಜಿಗಳನ್ನು ನಿಯಮಾನುಸಾರ ತಿರಸ್ಕರಿಸಲಾಗುತ್ತಿದೆ. |
| ಆ) | ಬಂದಿದ್ದಲ್ಲಿ, ಮಂಡಳಿ ಪರಿಶೀಲಿಸುವ ತಂತ್ರಾಂಶಗಳಲ್ಲಿ ಅನ್ಯ ವೃತ್ತಿ ಕಂಡು ಬರುವ ಕಟ್ಟಡ ಕಾರ್ಮಿಕರ ಮಕ್ಕಳ ವಿದ್ಯಾರ್ಥಿ ವೇತನದ ಅರ್ಜಿಯನ್ನು ಕಲ್ಯಾಣ ಮಂಡಳಿಯ ಹಂತದಲ್ಲಿ ತಡೆಹಿಡಿದು ತಾಲ್ಲೂಕುವಾರು ಕಾರ್ಮಿಕ ಇಲಾಖಾ ಕಛೇರಿಗಳಿಗೆ ವಾಪಾಸ್ ಕಳುಹಿಸಿ ಕೂಲಂಕುಶವಾಗಿ ಮರು ಪರಿಶೀಲನೆ ಮಾಡಲು ಸರ್ಕಾರ ಇದುವರೆಗೆ ಯಾವುದೇ ಅಗತ್ಯ ಹಾಗೂ ಸೂಕ್ತ ಕ್ರಮ ವಹಿಸದೇ ಇರಲು ಕಾರಣಗಳೇನು; | ಕುಟುಂಬ ತಂತ್ರಾಂಶದಲ್ಲಿ ಅನ್ಯ ವೃತ್ತಿ ಕಂಡು ಬಂದ ಅರ್ಜಿಗಳನ್ನು ಕಾರ್ಯವ್ಯಾಪ್ತಿಯ ಹಿರಿಯ ಕಾರ್ಮಿಕ ನಿರೀಕ್ಷಕರು/ ಕಾರ್ಮಿಕ ನಿರೀಕ್ಷಕರುಗಳಿಗೆ ಕಳುಹಿಸಿ ಸದರಿಯವರು ಪರಿಶೀಲನೆ ಮಾಡಿ ನೈಜ ಕಟ್ಟಡ ಕಾರ್ಮಿಕರೆಂದು ಅನುಮೋದಿಸಿದ ನಂತರ ಡಿಬಿಟಿ ತಂತ್ರಾಂಶದ ಮೂಲಕ ಫಲಾನುಭವಿಗಳ ಆಧಾರ್ ಸಂಖ್ಯೆಗೆ ಜೋಡಣೆಯಾಗಿರುವ ಬ್ಯಾಂಕ್ ಖಾತೆಗೆ ಪಾವತಿಸಲಾಗಿರುತ್ತದೆ. |

| | | |
|---|---|---|
| ಇ) | ಯಾವ ಕಾಲಮಿತಿಯೊಳಗೆ ನೈಜ ಕಟ್ಟಡ ಕಾರ್ಮಿಕರ ಮಕ್ಕಳು ಸದರಿ ಸೌಲಭ್ಯ ಪಡೆಯುವುದರಿಂದ ವಂಚಿತರಾಗುವುದನ್ನು ತಪ್ಪಿಸಲು ಅಗತ್ಯ ಹಾಗೂ ಸೂಕ್ತ ಕ್ರಮ ವಹಿಸಲಾಗುವುದು? | ಕುಟುಂಬ ತಂತ್ರಾಂಶದಲ್ಲಿ ಕಟ್ಟಡ ಕಾರ್ಮಿಕ ಎಂದು ನಮೂದಾಗಿರುವ ಕಾರ್ಮಿಕರಿಗೆ ಡಿಬಿಟಿ ಮೂಲಕ ಶೈಕ್ಷಣಿಕ ಸಹಾಯಧನವನ್ನು ಫಲಾನುಭವಿಗಳ ಬ್ಯಾಂಕ್ ಖಾತೆಗೆ ನೇರವಾಗಿ ಪಾವತಿಸಲಾಗುತ್ತಿದೆ ಮತ್ತು ಕಟ್ಟಡ ಕಾರ್ಮಿಕ ಎಂಬ ವೃತ್ತಿ ಹೊರತುಪಡಿಸಿ ಬೇರೆ ವೃತ್ತಿ ಎಂದು ನಮೂದಾಗಿದ್ದಲ್ಲಿ ಹಿರಿಯ ಕಾರ್ಮಿಕ ನಿರೀಕ್ಷಕರು ಮತ್ತು ಕಾರ್ಮಿಕ ನಿರೀಕ್ಷಕರ ಮೂಲಕ ನೈಜ ಕಾರ್ಮಿಕರು ಎಂಬುದನ್ನು ಪರಿಶೀಲಿಸಿ ನೈಜ ಕಟ್ಟಡ ಕಾರ್ಮಿಕರಿದ್ದಲ್ಲಿ ಶೈಕ್ಷಣಿಕ ಸಹಾಯಧನವನ್ನು ಡಿಬಿಟಿ ಮೂಲಕ ಫಲಾನುಭವಿಗಳ ಬ್ಯಾಂಕ್ ಖಾತೆಗೆ ನೇರವಾಗಿ ಪಾವತಿಸಲಾಗುತ್ತಿದೆ. |

**ಕಾಇ 475 ಎಲ್‌ಇಟಿ 2025**

**(ಸಂತೋಷ್ ಎಸ್ ಲಾಡ್)**
**ಕಾರ್ಮಿಕ ಸಚಿವರು**